

ಸುರಂಗದ ಆಳದಿಂದ ಬದುಕಿ ಬಂದ ಕಾರ್ಮಿಕನಿಂದ ರಕ್ಷಣಾಪಡೆಯ ಕಾರ್ಯಕರ್ತನಿಗೆ ಕೃತಜ್ಞತೆ

ಮಾಡಿ ಗೆಲುವಾಗಿಟ್ಟಿರಬೇಕೆಂದು ಯೋಚಿಸಿದ ವೈದ್ಯರುಗಳು, 'ಯೋಗ ಮತ್ತು ಧ್ಯಾನ ಮಾಡಿರಿ' ಎಂಬ ಸಲಹೆ ನೀಡಿದರು. 'ನಡೆಯಲು ಜಾಗವಿದ್ದರೆ ಒಂದೆರಡು ಫರ್ಲಾಂಗ್ ಗುಂಪಾಗಿ ನಡೆಯಿರಿ' ಎಂದರು. ಅದನ್ನು ಕಾರ್ಮಿಕರು ಅನುಸರಿಸಿದರು. ಸಮಯ ಸಿಕ್ಕಾಗಲೆಲ್ಲ ಜೊತೆಯಾಗಿ ನಡೆದರು, ಹಾಡಿಕೊಂಡರು. ಪರಸ್ಪರರ ಸಮಸ್ಯೆಗಳನ್ನು ಚರ್ಚಿಸಿ, ಹೊರಗೆ ಹೋದರೆ ಎಲ್ಲ ಸರಿಯಾಗುತ್ತದೆ ಎಂದು ಒಬ್ಬರಿಗೊಬ್ಬರು ಸಮಾಧಾನ ಹೇಳಿಕೊಂಡರು.

ಇತ್ತ ಮೇಲಿನಿಂದ ಸುರಂಗ ಕೊರೆಯುವ ಕೆಲಸ ಶುರುವಾಗಿ 60 ದಿನ ಕಳೆದಿದ್ದವು. ಕೊನೆಗೆ 69 ದಿನಗಳ ನಂತರ ಹೊಸದಾಗಿ ಕೊರೆದಿದ್ದ ಪಕ್ಕದ ಸುರಂಗದಿಂದ ಕ್ಯಾಪ್ಸೂಲ್ ಕಳಿಸಲಾಗಿತ್ತು. ಅದನ್ನು ಕ್ರೇನ್ ಮೂಲಕ ಎತ್ತುವುದೆಂದು ತಯಾರಿ ಮಾಡಿಕೊಳ್ಳಲಾಗಿತ್ತು. ಅದರಲ್ಲಿ ಕುಳಿತು ಜೀವ ಉಳಿಸಿಕೊಂಡ 33 ಜನ 69 ದಿನಗಳ ಸುದೀರ್ಘ ಹೋರಾಟದ ನಂತರ ಜೀವಂತವಾಗಿ ಹೊರಬಂದರು. ಜಗತ್ತಿನ ಇದುವರೆಗಿನ ಅತ್ಯಂತ ದೀರ್ಘ ಸಮಯದ ಕಾರ್ಯಾಚರಣೆ ಅದು.

## ಜೀವವುಳಿಸಿದ ಸಂಗೀತ

ಆಸ್ಟ್ರೇಲಿಯದ ಟಾಡ್ ರಸೆಲ್ ಮತ್ತು ಬ್ರಾಂಟ್ ವೆಬ್ ಇಬ್ಬರೂ 35ರ ವಯಸ್ಸಿನ ಆಸುಪಾಸಿನವರು, ಬಂಗಾರದ ಗಣಿ ಕೆಲಸಗಾರರು. 2006ರ ಏಪ್ರಿಲ್ ತಿಂಗಳ ಮಧ್ಯಾಹ್ನ ಊಟವಾದ ನಂತರ ಖುಷಿಯಾಗಿ ಕೆಲಸ ಮಾಡುವಾಗ ಸಂಭವಿಸಿದ ಭೂಕಂಪನದಿಂದಾಗಿ, ಟಾಸ್ಮೇನಿಯಾದ ಗಣಿಭಾಗಗಳ ಬಂಡೆಗಲ್ಲುಗಳು ಸ್ಥಾನ ಪಲ್ಲಟಗೊಂಡು ಇವರಿಬ್ಬರೂ ಇದ್ದ ಸುರಕ್ಷತಾ ಬೋನು (Safety Cage) ಬಂಡೆಗಲ್ಲುಗಳಿಂದ ಮುಚ್ಚಿ ಹೋಯಿತು. ಬೋನು ಹೊರಬರುವ ದಾರಿ ಬಂದಾಯಿತು.

ಆರಂಭದಲ್ಲಿ ಇವರಿಬ್ಬರೂ ಸತ್ತೇ ಹೋದರು ಎಂದು ಮನೆಯವರಿಗೆ ಸುದ್ದಿ ಮುಟ್ಟಿಸಲಾಗಿತ್ತು. ಆದರೆ ಥರ್ಮಲ್ ಸ್ಕ್ಯಾನರ್ ಮತ್ತು ಕ್ಯಾಮೆರಾಗಳನ್ನು ಭೂಕಂಪನದ ಜಾಗಕ್ಕಿಳಿಸಿದಾಗ ಅವರಿಬ್ಬರೂ ಬದುಕಿರುವುದು ತಿಳಿಯಿತು. ಅಲ್ಲಿಗಾಗಲೇ ಏಳು ದಿನಗಳು ಕಳೆದಿದ್ದವು. ಮೇಲಿನಿಂದ 40 ಅಡಿ ಉದ್ದದ ಕೊಳವೆಯನ್ನು ಕೆಳಗಿಳಿಸಿ, ಅದರ ಮೂಲಕ ಆಹಾರ ಕಳಿಸಲಾಗಿತ್ತು. ಕುಸಿತವಾದ 5 ದಿನಗಳ ನಂತರ ರಕ್ಷಣಾ ಕಾರ್ಯ ಶುರುವಾಗಿತ್ತು.

ಊಟದ ಜೊತೆಗೆ ಸಂಗೀತ ಕೇಳಲು ಅನುಕೂಲವಾಗುವಂತೆ ಐಪಾಡ್ ಕಳಿಸಲಾಗಿತ್ತು. ರಕ್ಷಣಾ ತಂಡದ ಕ್ರೇನ್ ತಮ್ಮಿಬ್ಬರನ್ನು ತಲುಪುವವರೆಗೂ ಹಾಡು ಕೇಳುತ್ತ ಒಬ್ಬರಿಗೊಬ್ಬರು ಧೈರ್ಯ ಹೇಳಿಕೊಂಡು ಕಾಲ ಕಳೆದು ಕೊನೆಗೆ 14 ದಿನಗಳ ನಂತರ ಮೇಲೆ ಬಂದರು. 'ಇದು ಹೇಗೆ ಸಾಧ್ಯವಾಯಿತು? ನಾವೇ ಇದನ್ನು ಮಾಡಿದೆವಾ? ನಂಬಲಾಗುತ್ತಿಲ್ಲ' ಎಂದ ರಕ್ಷಣಾ ತಂಡದ ಅಧಿಕಾರಿಯೊಬ್ಬರು, ನಮ್ಮೊಂದಿಗೆ ಹಾಗೂ ಅವರಿಬ್ಬರೊಂದಿಗೆ ಇದ್ದ ಯಾವುದೋ ಅತೀಂದ್ರಿಯ ಶಕ್ತಿಯೇ ಈ ಕೆಲಸ ಮಾಡಿರಬೇಕು ಎಂದಿದ್ದರು.

## ಮರಗಳ ತೊಗಟೆಯ ಊಟ

ಸಂಖ್ಯೆಯ ದೃಷ್ಟಿಯಿಂದ ಹೇಳುವುದಾದರೆ 2010ರಲ್ಲಿ ಚೀನಾದಲ್ಲಿ ಘಟಿಸಿದ ಗಣಿ ದುರ್ಘಟನೆ ತುಂಬಾ ದೊಡ್ಡದೆನಿಸುತ್ತದೆ. ಶಾಂಕ್ಸಿ ಪ್ರಾಂತ್ಯದಲ್ಲಿ ಕುಸಿದ ಗಣಿಯ ಒಳಗೆ 153 ಜನ 15 ದಿನಗಳ ಕಾಲ ಸಿಲುಕಿ ಹಾಕಿಕೊಂಡಿದ್ದರು.

ರಕ್ಷಣಾ ತಂಡದ ಮೂರು ಸಾವಿರ ಸದಸ್ಯರು ಎರಡು ವಾರಗಳ ಕಾಲ ನಿರಂತರ ಕೆಲಸ ಮಾಡಿ, ಸಮಾನಾಂತರ ಸುರಂಗ ಕೊರೆದು 115 ಜನರನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿದ್ದರು. ಗಣಿಯೊಳಗಿನ ಅನನುಕೂಲಕರ ಸನ್ನಿವೇಶಗಳಿಗೆ ಸಿಲುಕಿ 23 ಜನ ಪ್ರಾಣ ಕಳೆದುಕೊಂಡಿದ್ದರು. ಎಷ್ಟೇ ಹುಡುಕಿದರೂ ಉಳಿದ ಹದಿನೈದು ಜನ ಪತ್ತೆಯಾಗಲೇ ಇಲ್ಲ.

ದುರ್ಘಟನೆಯಲ್ಲಿ ಜೀವವುಳಿಸಿಕೊಂಡವರು ಗಣಿಯಲ್ಲಿ ನುಗ್ಗಿದ ನೀರಿನಲ್ಲಿ ಮುಳುಗದಿರಲು ಗಣಿ ಗೋಡೆಗಳಿಗೆ ತಮ್ಮನ್ನು ತಾವೇ ತಮ್ಮ ಸೊಂಟದ ಬೆಲ್ಟ್‌ಗಳ ಸಮೇತ ನೇತು ಹಾಕಿಕೊಂಡಿದ್ದರು. ತಿನ್ನಲು ಏನೂ ಸಿಗದಿದ್ದಾಗ ಗಣಿ ಕೆಲಸಕ್ಕಾಗಿ ಒಳಗೆ ನಿಲ್ಲಿಸಿದ್ದ ಪೈನ್‌ಮರಗಳ ತುಂಡಿನ ತೊಗಟೆಯನ್ನೇ ತಿಂದು ಜೀವ ಹಿಡಿದುಕೊಂಡಿದ್ದರು. ರಕ್ಷಣಾ ತಂಡದವರು ಐದು ದಿನಗಳ ನಂತರ ಆಹಾರ ತಲುಪಿಸಿದ್ದರು.